ಕಾಮವಾಗುವುದೇ ಇಲ್ಲ; 'ನೀನಿನ್ನೂ ವರ್ಜಿನ್ನಾ' ಎಂಬ ನಾಯಕಿಯ ಕಳಕಳಿಯ ನೇರ ಪ್ರಶ್ನೆಯ ನಂತರವೂ. ಹೌದು, ಅವನು ವರ್ಜಿನ್ನೇ ಎನ್ನುವುದೂ ಅವನ ಗಟ್ಟಿಪ್ರೇಮದ ಸಂಕೇತ.

ನಡುರಾತ್ರಿ ಮೆಟ್ರೊ ರೈಲಿನಲ್ಲಿ ಇಬ್ಬರ ಪ್ರಯಾಣ. ಹಿಡಿದ ಕಂಬಿಗಳಿಂದ ಅವಳ ಕೈ ಅವನದರತ್ತ ಜಾರಿದರೆ, ಅವನ ಕೈಗಳು ಪ್ರಜ್ಞಾಪೂರ್ವಕವಾಗಿ ಇನ್ನೂ ದೂರ ಸರಿಯುತ್ತವೆ. ಅವಳ ನೆನಪಲ್ಲೇ ಬದುಕುತ್ತಿದ್ದರೂ, ಸಿಂಗಪುರದಲ್ಲಿ ನೆಲೆಗೊಂಡ ಆ ನಾಯಕಿಗೆ ಒಬ್ಬ ಮಗಳಿದ್ದಾಳೆ ಎಂಬ ಪ್ರಜ್ಞೆಯೂ ಅವನಿಗೆ ಇದೆ.

ಇಷ್ಟೆಲ್ಲ ಗಾಢಪ್ರೇಮಿಯಾದ ಅವನು ಸಲೀಸಾಗಿ ನಾಯಕಿ ಕೈತಪ್ಪಿಹೋಗಲು ಬಿಟ್ಟುಬಿಟ್ಟನೇ? ಹಾಗೇನಿಲ್ಲ ಅವನು ಸಂದರ್ಭದ ಕೂಸು ಎನ್ನಲೂ ನಿರ್ದೇಶಕರು ಕಾರಣ ಸೃಷ್ಟಿಸಿದ್ದಾರೆ. ಕೆಲವೊಮ್ಮೆ ಫ್ಲ್ಯಾಷ್ ಬ್ಯಾಕ್‌ನಲ್ಲಿ, ಕೆಲವೊಮ್ಮೆ ವಾಸ್ತವದಲ್ಲಿ ಕಥನಗಳನ್ನು ಉಪಕಥನಗಳಿಂದ ಶಿಲ್ಪವಾಗಿಸುವ ಕ್ರಮ ನಿರ್ದೇಶಕರದ್ದು.

ನಾಯಕಿಯ ಜತೆ ಇನ್ನೂ ಒಂದಿಷ್ಟು ಕ್ಷಣಗಳನ್ನು ಕಳೆಯಲು ವಿಮಾನದ ಟಿಕೆಟ್ಟನ್ನೇ ಖರೀದಿಸುವಷ್ಟು ಉದಾರಿಯೂ ಆದ ನಾಯಕ ಅನನ್ಯ ಎನಿಸುತ್ತಾನೆ. ಅವನು ಪ್ರೇಮದ ಗುಂಗಿನಲ್ಲಿ ಬದುಕು ಹಾಳುಮಾಡಿಕೊಳ್ಳಲಿಲ್ಲ. ಸಿಗಲಿಲ್ಲ ಎಂಬ ಕಾರಣಕ್ಕೆ ಅವಳ ಬದುಕನ್ನೂ ಹಾಳುಗೆಡವಲು ಹೋಗಲಿಲ್ಲ. ಅವನಿಗೆ ತನ್ನ ಪ್ರೇಮ ಗಾಢವೆಂದು ಗೊತ್ತಿದೆ. ಅದರೊಟ್ಟಿಗೇ ಬದುಕಿನಲ್ಲಿ ತುಂಬ ಮುಖ್ಯವಾದ ಜವಾಬ್ದಾರಿಯ ಪ್ರಜ್ಞೆಯೂ ಇದೆ. ಅವನ ಮನೆಯಲ್ಲಿನ ನೆನಪುಗಳ ಪೆಟ್ಟಿಗೆಗೆ ಅವಳು ಮಳೆಯಲ್ಲಿ ನೆಂದು ಬಿಚ್ಚಿಟ್ಟ ವಸ್ತ್ರವೂ ಒಣಗಿ ಸೇರುವುದರೊಂದಿಗೆ ಇನ್ನೊಂದು ಸೇರ್ಪಡೆ.

ವಿಜಯ್ ಸೇತುಪತಿ ಇಂಥ ನಾಯಕನ ಪಾತ್ರವನ್ನು ಜೀವಿಸಿದ್ದಾರೆ. ಅವರ ಪಾತ್ರಪ್ರೀತಿ ಹಿಂದಿಯ ಸಂಜೀವ್ ಕುಮಾರ್ ಅವರನ್ನು ನೆನಪಿಸುತ್ತದೆ. ಕಣ್ಣುಗಳಲ್ಲಿ ಅಭಿನಯಶಕ್ತಿಯ ಮೋಡವನ್ನು ಅವರು ಮಡಚಿಟ್ಟುಕೊಂಡಿರುವರೋ ಏನೋ? ಮುಖದ ತುಂಬಾ ನಗು, ಅಳು ಎರಡನ್ನೂ ತುಳುಕಿಸಬಲ್ಲ ತ್ರಿಶಾ ದೀರ್ಘ ಕಾಲ ನೆನಪಿನಲ್ಲಿ ಉಳಿಯುತ್ತಾರೆ. ಆದರೆ, ವಿಜಯ್ ಎದುರು ಅವರು ಅಭಿನಯದಲ್ಲಿ ಏನೇನೂ ಅಲ್ಲವೆನಿಸಿಬಿಡುತ್ತಾರೆ. ಆದಿತ್ಯ ಭಾಸ್ಕರ್ ಹಾಗೂ ಗೌರಿ ಕಿಶನ್ ಪ್ರೌಢಕಾಲದ ನಾಯಕ ನಾಯಕಿಯಾಗಿ ಕಾಡುತ್ತಾರೆ. ಅದರಲ್ಲೂ ಗೌರಿ ಹಾಡುಗಾರಿಕೆಯ ಪಲುಕುಗಳು ಈ ಕಾಲದ ಹುಡುಗರ ಎದೆಯಲ್ಲೂ ಹೊಸ ರಾಗಗಳನ್ನೆಬ್ಬಿಸುವಷ್ಟು ಶಕ್ತ.

ಮಹೇಂದ್ರನ್ ಜಯರಾಜು ಹಾಗೂ ಎನ್. ಷಣ್ಮುಗ ಸುಂದರಂ ಸಿನಿಮಾಟೊಗ್ರಫಿಗೆ ಭಾವಗಳನ್ನಷ್ಟೇ ಸೆರೆಹಿಡಿಯಬೇಕು ಎಂಬ ಪಾಠವನ್ನು ನಿರ್ದೇಶಕರೇ ಹೇಳಿರಲಿಕ್ಕೆ ಸಾಕು.

ಮುಖ್ಯವಾಗಿ ಗುರುತಿಸಬೇಕಾದದ್ದು ಗೋವಿಂದ ವಸಂತ ಅವರ ಸಂಗೀತದಲ್ಲಿ ಆಗಿರುವ ಇಳಯರಾಜಾ ಶೈಲಿಯ ವಯಲಿನ್ ಬಳಕೆಯನ್ನು. ಎಲ್ಲೆಲ್ಲಿ ಮೌನ ಇರಬೇಕೆಂಬ ಅವರ ಎಚ್ಚರಿಕೆಗೂ ಸಲಾಮು. ಕವಯಿತ್ರಿ ಉಮಾದೇವಿ ಹಾಗೂ ಕವಿ ಕಾರ್ತಿಕ್ ನೇತಾ ಬರೆದ ಗೀತಸಾಹಿತ್ಯ ಕೂಡ ಸಿನಿಮಾದ ಪಾತ್ರಗಳೇ ಆಗಿರುವುದು ಇನ್ನೊಂದು ವಿಶೇಷ.

ಭಗ್ನಪ್ರೇಮವನ್ನು ಕ್ರೋಧದ ಪರಿಧಿಗೆ ಸೋಕಿಸದೆ, ವೈಯಕ್ತಿಕ ಸಂವಾದದ ಪ್ರಾಂಗಣದ ಮೇಲೆ ನಿಲ್ಲಿಸಿದ್ದಾರೆ ನಿರ್ದೇಶಕ. ವಿಷಾದದ ಕಣ್ಣಹನಿಗಳ ಕಾಣಿಕೆ ನೋಡುಗರಿಗೆ. ನಾದದಲೆಗಳು ಅವರದ್ದೇ ಎದೆಗೆ.

(ಜಗತ್ತಿನ ಹಲವು ದೇಶ–ಭಾಷೆಗಳ ಸಿನಿಮಾಗಳನ್ನು ಪರಿಚಯಿಸಿದ
ಈ ಅಂಕಣ ಇಲ್ಲಿಗೆ ಮುಕ್ತಾಯ)